ರಜದ ಪ್ರಯಾಣಕ್ಕಾಗಿ ರಿಯಾಯಿತಿ ನೀಡಲು ವೆಚ್ಚ ಮಾಡಲಾದ ಮೊಬಲಗು

೨೦೮. ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).—ಶಿಕ್ಷಣ ಮಂತ್ರಿಗಳು ಈ ವಿಷಯ ಗಳನ್ನು ದಯವಿಟ್ಟು ತಿಳಿಸುವರೆ.

ಅ) ೧೯೬೯–೭೦, ೧೯೭೦–೭೧, ೧೯೭೧–೭೨ನೆಯ ಸಾಲಿನಲ್ಲಿ ಪ್ರತಿಯೊಂದರ ಪರ್ಯಂತ ಎಷ್ಟು ಜನ ಗೋಕಾಕ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರವಾಸದ ಮೇಲೆ ಹೋಗಿದ್ದರು ಮತ್ತು ಅವರಿಗೆ ತಗುಲಿದ ಒಟ್ಟು ಹಣದ ವೆಚ್ಚ ಎಷ್ಟು ;

ಆ) ಶಿಕ್ಷಕರು ಪ್ರವಾಸಕ್ಕೆ ಹೋಗದೆ ಎ.ಇ.ಓ. ಆಫೀಸಿನಲ್ಲಿ ಪೋಟೊ ರಶೀತಿಗಳನ್ನು ಕೊಟ್ಟಿರುವ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ಮತ್ತು ಇಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಕೊಳ್ಳಲಾಗುವುದು ?

(ಉತ್ತರಗಳ ಪಟ್ಟಿ ಬಂದಿರುವುದಿಲ್ಲ)

ಶ್ರೀ ಮುತ್ತಣ್ಣನವರ್.—ಮಾನ್ಯ ಅಧ್ಯಕ್ಷರೇ, ಸುಮಾರು ೨೨೧ ಶಿಕ್ಷಕರು ಪ್ರವಾಸಕ್ಕೆ ಹೋಗದೆ ಕೋಟಾ ರಶೀದಿಗಳನ್ನು ಹಾಜರು ಮಾಡಿರುವುದು ಮಂತ್ರಿಗಳ ಗಮನಕ್ಕೆ ಬಂದಿದೆಯೆ ? ಸಹಾಯಕ ವಿದ್ಯಾಧಿಕಾರಿಗಳೇ ಇದನ್ನು ಮಾಡುತ್ತಿದ್ದಾರೆ. ಇವರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ.ರಾಚಯ್ಯ.—ಇದರ ಬಗ್ಗೆ ವಿಚಾರಣೆ ಮಾಡಿಸುತ್ತಿದ್ದೇನೆ. ಯಾವ ಯಾವ ಉಪಾಧ್ಯಾಯರು ಮುಂಗಡ ಹಣವನ್ನು ಪಡೆದಿದ್ದರೋ ಅಂಥವರಿಂದ ಸಮಜಾಯಿಷಿ ರಶೀದಿಗಳನ್ನು ಕೇಳಿದ್ದೇವೆ. ಇನ್ನು ಕೆಲವರು ಕೊಟ್ಟಿಲ್ಲ. ನೋಟೀಸ್ ಕೊಟ್ಟು ರಶೀದಿಗಳನ್ನು ಪಡೆಯಲಾಗುತ್ತಿದೆ. ಪೋಟೊ ರಶೀದಿ ಗಳು ಬಂದಿರತಕ್ಕದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಸಿ.ಓ.ಡಿ. ವಿಚಾರಣೆಯಾಗಿದ್ದರೂ ಕೂಡ ಇತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ ? ತಪ್ಪಿತಸ್ಥರಿಗೇ ಪ್ರೊಮೋಷನ್ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ.—ಸಿ.ಓ.ಡಿ. ಎನ್‌ಕ್ವೈರಿ ಆಗಿರತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ರಾಮಪ್ಪ.—ಬಳ್ಳಾರಿ ವಿಚಾರ ನೋಡಿ.

ಅಧ್ಯಕ್ಷರು.—ಪ್ರಶ್ನೆ ಇರುವುದು ಗೋಕಾಕ್‌ಗೆ ಸಂಬಂಧಪಟ್ಟದ್ದು.

ಶ್ರೀ ಮುತ್ತಣ್ಣನವರ್.—ನೋಟೀಸ್ ಇಷ್ಯೂ ಮಾಡಿದ್ದರೂ ಯಾರೂ ರಶೀದಿಗಳನ್ನು ಕೊಟ್ಟಿಲ್ಲ, ಅಂಥವರಿಂದ ಹಣ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ನೋಟೀಸ್ ಮುಟ್ಟಿ ೬ ತಿಂಗಳಾದರೂ ಕೂಡ ಯಾವ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಬೆಂಗಳೂರು ಡೈರಿಯಿಂದ ಸರಬರಾಜು ಮಾಡುವ ಹಾಲು ಮತ್ತು ಸರ್ಕಾರ ಕೈಕೊಂಡ ಕ್ರಮ

೧೭೪. ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) —ಮಾನ್ಯ ಪಶುಸಂಗೋಪನಾ ಪಶು ವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಂಗಳೂರು ನಗರ ಡೈರಿ ದಿನವಹಿ ಸರಬರಾಜು ಮಾಡುತ್ತಿರುವ ಹಾಲಿನ ಪ್ರಮಾಣ ಎಷ್ಟು ?

ಆ) ಈ ಹಾಲಿನ ಪ್ರಮಾಣ ಸಾಕಷ್ಟು ಇಲ್ಲದಿರುವುದರಿಂದ ಜನತೆಗೆ ಬೇಕಾಗುವಷ್ಟು ಹಾಲು ಸರಬರಾಜು ಮಾಡಲು ಸರ್ಕಾರ ಕೈಕೊಂಡ ಕ್ರಮಗಳೇನು ?

ಶ್ರೀ ವಿಶ್ವನಾಥರೆಡ್ಡಿ, ಮುದ್ನಾಳ್ (ಪಶುಸಂಗೋಪನಾ ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು) —

ಅ) ದಿನವಹಿ ೨,೫೦,೦೦೦ ಲೀಟರುಗಳು.

ಆ) ಹೆಚ್ಚುವರಿ ಹಾಲಿನ ಬೇಡಿಕೆಯನ್ನು ನೀಗಲು ದಿನವಹಿ ೨,೦೦,೦೦೦ ಲೀಟರಂಗಳ ಸಾಮರ್ಥ್ಯವುಳ್ಳ ತಾಯಿ ಡೈರಿಯನ್ನು ಯಲಹಂಕದಲ್ಲಿ ಸ್ಥಾಪಿಸಲಾಗುತ್ತಿದೆ. ಈ ತಾಯಿ ಡೈರಿಯು ೧೯೮೪ ಮಧ್ಯ ಭಾಗದಲ್ಲಿ ಆರಂಭವಾಗುವ ನಿರೀಕ್ಷೆಯಿದೆ.

ಗುಲ್ಬರ್ಗ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಸಂಖ್ಯೆ

೫೮. ಶ್ರೀ ಕೆ ಬಿ. ಶಾಣಪ್ಪ (ಶಹಾಬಾದ್).—ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ಗುಲ್ಬರ್ಗ ಜಿಲ್ಲೆಯಲ್ಲಿರುವ ಒಟ್ಟು ಡಿಗ್ರಿ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಅವುಗಳಲ್ಲಿ ಸರಕಾರಿ ಮತ್ತು ಖಾಸಗಿ ಕಾಲೇಜುಗಳ ಸಂಖ್ಯೆ ಎಷ್ಟು ;

ಇ) ಸರಕಾರಿ ಕಾಲೇಜುಗಳಿಗೆ ಬೇಕಾದ ಶಿಕ್ಷಕರ ಸಂಖ್ಯೆ ಎಷ್ಟು ;

ಈ) ಈಗ ಎಷ್ಟು ಶಿಕ್ಷಕರನ್ನು ಸರಕಾರದವರು ತುಂಬಿದ್ದಾರೆ ?

ಡಿ.ಸಿ.ಎಚ್. ೩೨ ಹೈಬ್ರಿಡ್ ಹತ್ತಿ ಬೀಜದ ಬಗ್ಗೆ

೧೨೨. ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವ್ಯವಸಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಡಿಸಿಎಚ್-೩೨ ಹೈಬ್ರಿಡ್ ಹತ್ತಿ ಬೀಜ ಉತ್ಪಾದಕರಿಗೆ, ಕರ್ನಾಟಕ ರಾಜ್ಯ ಬೀಜ ನಿಗಮ ದವರು ಹತ್ತು ಗುಂಟೆಯ ಒಂದು ಪ್ಲಾಟಿಗೆ ರೂ. ೧೨೫೦ ಠೇವಣಿ ಮತ್ತು ರೂ. ೫೦೦ ಷೇರ್ ಹಣ ನಿಗದಿ ಪಡಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಈ ರೀತಿ ಹಣ ನಿಗದಿ ಪಡಿಸಲು ನಿಗಮಕ್ಕೆ ಅಧಿಕಾರವಿದೆಯೆ ?

ಆ) ರಾಜ್ಯದಲ್ಲಿ ಎಷ್ಟು ಜನ ರೈತರು ಡಿಸಿಎಚ್-೩೨ರ ಬೀಜೋತ್ಪಾದನೆ ಮಾಡಲು ಬೇಡಿಕೆ ಅರ್ಜಿ ಸಲ್ಲಿಸಿದ್ದರು, ಇವರಲ್ಲಿ ಎಷ್ಟು ಜನರಿಗೆ ಜಮೀನು ನೀಡಲಾಗಿದೆ ?

ಇ) ಡಿಸಿಎಚ್-೩೨ ಬೀಜವನ್ನು ನಿಗಮ ಯಾವ ಬೆಲೆಗೆ ಖರೀದಿಸಿ, ಯಾವ ಬೆಲೆಯಲ್ಲಿ ಮಾರುತ್ತಿದ್ದಾರೆ ?

ಈ) ಜಿಲ್ಲಾ ಮಾಟ್ಟದ ಬೀಜೋತ್ಪಾದಕರ ಸಮಿತಿಯು ಕಾರ್ಯನಿರ್ವಹಣೆಗಳಾವುವು ?

ಶ್ರೀ ಬಿ.ಎಲ್ ಗೌಡ (ಕೃಷಿ ಸಚಿವರು).—

ಅ) ಬಂದಿದೆ. ಈ ರೀತಿ ಹಣ ನಿಗದಿ ಪಡಿಸಲು ನಿಗಮಕ್ಕೆ ಅಧಿಕಾರ ಇದೆ.

ಆ) ೫೦೧ ಅರ್ಜಿಬಂದಿದ್ದು ೪೯೭ ಅರ್ಜಿದಾರರಿಗೆ ಪ್ಲಾಟು ಹಂಚಲಾಗಿದೆ.

ಇ) ೧೯೮೩-೮೪ರಲ್ಲಿ ಮಾತ್ರ ಡಿಸಿಎಚ್-೩೨ ಬೀಜೋತ್ಪಾದನೆ ಮಾಡಲು ತಾಕುಗಳನ್ನು ರೈತರಿಗೆ ಕೊಡಲಾಗಿದೆ ಸಧ್ಯಕ್ಕೆ ಕೆ.ಜಿ.ಗೆ ೬೫ ರೂ ಖರೀದಿ ದರ ಎಂದು ಬೀಜೋತ್ಪಾದಕರಿಗೆ ತಿಳಿಸಲಾಗಿದೆ. ಮಾರಾಟದರವನ್ನು ಇನ್ನು ನಿಗದಿ ಪಡಿಸಿಲ್ಲ.

ಈ) ಈ ತರಹ ಸಮಿತಿಯನ್ನು ಸರ್ಕಾರ ನೇಮಿಸಿರುವುದಿಲ್ಲ.